KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
DEPARTMENT / SUBJECT:
NAME OF THE NEWS PAPER:
DATE: 14/1/2020

ಪರಿಷತ್ ಸಭಾಪತಿ ಹುದ್ದೆ ಮೇಲೆ ಬಿಜೆಪಿ ಕಣ್ಣು | ವಿಧಾನಸಭೆ, ಪರಿಷತ್‌ನಲ್ಲಿ ಅವಿಶ್ವಾಸ ಮಂಡನೆಗೆ ಚಿಂತನೆ

# ಮೇಲ್ಮನೆಯಲ್ಲಿ ಬಿಜೆಪಿಗೆ ಜೆಡಿಎಸ್ ಸಹಾಯ?

• ಎಸ್ ಲಕ್ಷ್ಮಿನಾರಾಯಣ

ಬೆಂಗಳೂರು: ವಿಧಾನಪರಿಷತ್ ಸಭಾಪತಿ ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷ ಸ್ಥಾನ ತನ್ನದಾಗಿಸಿಕೊಳ್ಳಲು ಆಡಳಿತಾ ರೂಢ ಬಿಜೆಪಿ ಮುಂದಾಗಿದ್ದು ಕಾರ್ಯತಂತ್ರ ರೂಪಿಸುತ್ತಿದೆ.

ವಿಧಾನಪರಿಷತ್ ಸಭಾಪತಿ ಆಗಿರುವ ಕಾಂಗ್ರೆಸ್‌ನ ಪ್ರತಾಪಚಂದ್ರಶೆಟ್ಟಿ, ವಿಧಾನಸಭೆ ಉಪ ಸಭಾಧ್ಯಕ್ಷರಾಗಿರುವ ಜೆಡಿಎಸ್‌ನ ಕೃಷ್ಣಾರೆಡ್ಡಿ ಅವರನ್ನು ಇಳಿಸಿ ತಮ್ಮ ಪಕ್ಷದವರಿಗೆ ಅವಕಾಶ ಕಲ್ಪಿಸಲು ಮುಂದಾಗಿದೆ.

ವಿಧಾನಪರಿಷತ್‌ನಲ್ಲಿ ಜೆಡಿಎಸ್ ಬೆಂಬಲ ಪಡೆದು ಉಪ ಸಭಾಪತಿ ಸ್ಥಾನ ಜೆಡಿಎಸ್‌ಗೆ ಬಿಟ್ಟುಕೊಟ್ಟು ಸಭಾಪತಿ ಸ್ಥಾನ ಬಿಜೆಪಿಗೆ ಪಡೆಯುವುದು, ವಿಧಾನಸಭೆಯಲ್ಲಿ ಹೇಗೂ ಬಿಜೆಪಿಗೆ ಬಹುಮತ ಇರುವುದರಿಂದ ಉಪ ಸಭಾಧ್ಯಕ್ಷ ಸ್ಥಾನ ಪಡೆದು ಪಕ್ಷದವರಿಗೆ ಅವಕಾಶ ಮಾಡಿಕೊಡಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಎರಡೂ ಕಡೆ ಅವಿಶ್ವಾಸ ನಿರ್ಣಯ ಮಂಡಿಸುವ ಬಗ್ಗೆ ತೆರೆಮರೆಯ ಚರ್ಚೆಗಳು ನಡೆಯುತ್ತಿವೆ. ಪರಿಷತ್‌ನಲ್ಲಿ ಸಭಾಪತಿ ಸ್ಥಾನ ತೆರವುಗೊಳಿಸಿ ಹಾಲಿ ಸಚಿವರಾಗಿರುವ ಕೋಟಾ ಶ್ರೀನಿವಾಸ ಪೂಜಾರಿ ಅವರಿಗೆ ಸಭಾಪತಿ ಸ್ಥಾನ ನೀಡುವ ಬಗ್ಗೆಯೂ ಚಿಂತನೆ ನಡೆದಿದೆ. ಕರಾವಳಿ ಭಾಗದವರಿಂದ ತೆರವಾಗುವ ಸ್ಥಾನ ಕರಾವಳಿಯವರಿಗೆ ಕೊಟ್ಟಂತಾಗುತ್ತದೆ ಎಂಬುದು ಬಿಜೆಪಿ ನಾಯಕರ ವಾದವಾಗಿದೆ.

ವಿಧಾನಸಭೆಯಲ್ಲಿ ಉಪ ಸಭಾಧ್ಯಕ್ಷರಾಗಿರುವ ಕೃಷ್ಣಾರೆಡ್ಡಿ ಅವರಿಂದ ತೆರವಾಗುವ ಸ್ಥಾನಕ್ಕೆ ಬಿಜೆಪಿಯ ಸಚಿವಾಕಾಂಕ್ಷಿಗಳು ಅಥವಾ ಸಂಪುಟದಿಂದ ತೆಗೆಯುವವರಿಗೆ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ ಎಂದು ಹೇಳಲಾಗಿದೆ. ಇಲ್ಲಿ, ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಗೈರು ಹಾಜರಿಯಲ್ಲಿ ಕಲಾಪ ನಡೆಸಲು ಬಿಜೆಪಿಯವರೇ ಉಪ ಸಭಾಧ್ಯಕ್ಷರು ಇದ್ದರೆ ಸೂಕ್ತ ಎಂಬ ಲೆಕ್ಕಾಚಾರವಿದೆ ಎಂದು ಹೇಳಲಾಗಿದೆ.

| ವಿಧಾನ ಪರಿಷತ್ ಬಲಾಬಲ | |
|---|---|
| ಒಟ್ಟು | 75 |
| ಕಾಂಗ್ರೆಸ್ | 37 |
| ಬಿಜೆಪಿ | 18 |
| ಜೆಡಿಎಸ್ | 16 |
| ಪಕ್ಷೇತರರು | 2 |
| ಸಭಾಪತಿ | 1 |
| ಖಾಲಿ | 1 |

| ವಿಧಾನಸಭೆ ಬಲಾಬಲ | |
|---|---|
| ಒಟ್ಟು | 224 |
| ಬಿಜೆಪಿ | 116 |
| ಕಾಂಗ್ರೆಸ್ | 68 |
| ಜೆಡಿಎಸ್ | 34 |
| ಬಿಎಸ್‌ಪಿ | 1 |
| ಪಕ್ಷೇತರ | 2 |
| ಸ್ಪೀಕರ್ | 1 |
| ತೆರವು | 2 |

**ಜೂನ್‌ಗೆ ಬಲ ಹೆಚ್ಚಳ:** 75 ಸದಸ್ಯ ಬಲದ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ 37, ಬಿಜೆಪಿ 18, ಜೆಡಿಎಸ್ 16, ಎರಡು ಪಕ್ಷೇತರರು, ಸಭಾಪತಿ ಹಾಗೂ ಒಂದು ಸ್ಥಾನ (ರಿಜ್ವಾನ್ ಅರ್ಷದ್) ತೆರವಾಗಿದೆ.

ಜೂನ್ 30 ಕ್ಕೆ ಕಾಂಗ್ರೆಸ್ ಹಾಗೂ ಜೆಡಿಎಸ್‌ನ 7 ಸ್ಥಾನ ತೆರವಾಗಲಿದ್ದು, ಆಗ ಬಿಜೆಪಿಗೆ 4 ಸ್ಥಾನ ಲಭ್ಯವಾಗಲಿದ್ದು, ಅದಕ್ಕೂ ಮುನ್ನ ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಕಾಂಗ್ರೆಸ್‌ನ ಐವರು ನಿವೃತ್ತಿಯಾಗಲಿದ್ದಾರೆ. ಆಗ ಬಿಜೆಪಿಯ ಸಂಖ್ಯೆ 27 ಕ್ಕೆ ಏರಿಕೆಯಾಗಲಿದೆ. ಕಾಂಗ್ರೆಸ್ ಸಂಖ್ಯೆ 33 ಕ್ಕೆ, ಜೆಡಿಎಸ್ ಸಂಖ್ಯೆ 15 ಕ್ಕೆ ಇಳಿಯಲಿದೆ.

ಆ ನಂತರ ಎದುರಾಗುವ ಅಧಿವೇಶನದಲ್ಲಿ ಜೆಡಿಎಸ್ ಹಾಗೂ ಪಕ್ಷೇತರರ ಬೆಂಬಲ ಪಡೆದು ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ತೀರ್ಮಾನಿಸಲಾಗಿದೆ. ಜೆಡಿಎಸ್‌ನ ಕೆಲವು ಸದಸ್ಯರ ಜತೆ ಈ ಬಗ್ಗೆ ಚರ್ಚಿಸಲಾಗಿದೆ ಎಂದು ಹೇಳಲಾಗಿದೆ. ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರ ಸಂಖ್ಯೆ ಸೇರಿದಂತೆ ಒಂದೊಮ್ಮೆ ಜೆಡಿಎಸ್ ನಾಯಕರು ಒಪ್ಪದಿದ್ದರೆ ಜೆಡಿಎಸ್ ಸದಸ್ಯರ ಬೆಂಬಲ ಪಡೆದು ಸಭಾಪತಿ ಹಾಗೂ ಉಪ ಸಭಾಪತಿ ಸ್ಥಾನ ಎರಡನ್ನೂ ಪಡೆಯಲು ಕಾರ್ಯತಂತ್ರ ರೂಪಿಸಲಾಗಿದೆ ಎಂದು ತಿಳಿದು ಬಂದಿದೆ.